# ವಿಶ್ವಾಸಾರ್ಹ ಯಾತ್ರೆ:

## ಪ್ರೇಮಪಥದಲ್ಲಿ ಮುನ್ನಡೆ

ಪ್ರಿಯ ಸ್ನೇಹಿತರೆ,

ಎಲ್ಲ ಆಧ್ಯಾತ್ಮಿಕ ಅನ್ವೇಷಕರೂ ಸ್ವಯಂ–ಪರಿವರ್ತನೆಯೆಂಬ ಸಮಾನ ಗುರಿಯನ್ನು ಹೊಂದಿರುತ್ತಾರೆ. ಹಲವು ಆಧ್ಯಾತ್ಮಿಕ ಮಾರ್ಗಗಳು ಗುರುವಿನ ಮೇಲಿನ ಅವಲಂಬನೆಯನ್ನು ಸಮರ್ಥಿಸುತ್ತವೆ; ಆದರೆ ನಾವು ಮತ್ತೊಬ್ಬರನ್ನು ಅವಲಂಬಿಸಿರುವವರೆಗೂ ಪರಿವರ್ತನೆ ಅಸಾಧ್ಯ. ನಾವು ವೈಯಕ್ತಿಕವಾಗಿ ಹೊಣೆಯನ್ನು ಹೊತ್ತುಕೊಂಡು, "ನಾನು ಮಾಡಲೇಬೇಕು," ಎಂದುಕೊಂಡಾಗ ಮಾತ್ರವೇ ಪರಿವರ್ತನೆ ಸಾಧ್ಯವಾಗುತ್ತದೆ. ಭಗವಂತನನ್ನು ಅವಲಂಬಿಸುವುದೂ ಸಹ "ಹೊಣೆಯನ್ನು ಮತ್ತೊಬ್ಬರ ತಲೆಗೆ ಕಟ್ಟಿದ" ಹಾಗೆಯೆ.

ನನ್ನ ಪ್ರಗತಿ ಅಥವಾ ಪರಿವರ್ತನೆಗೆ, ನಾನು ನನ್ನ ಗುರುವನ್ನು ಅಥವಾ ಬೇರೆ ಯಾರನ್ನಾದರೂ ಹೊಣೆಗಾರರನ್ನಾಗಿ ಮಾಡಿದರೆ, ಅಲ್ಲಿ ಪರಿವರ್ತನೆ ಆಗುವುದಿಲ್ಲ. ಅದಕ್ಕೆ ಕಾರಣ ಸರಳ: ಯಾವುದರ ಅಗತ್ಯವಿತ್ತೋ ಅದನ್ನು ದೇವರು ಅಥವಾ ಗುರು ಅದಾಗಲೇ ಮಾಡಿದ್ದಾರೆ. ನನ್ನ ಹೃದಯದಲ್ಲಿ ಬೀಜರೂಪದಲ್ಲಿ ಏನನ್ನು ನೀಡಲಾಗಿದೆಯೊ ಅದನ್ನು ಗ್ರಹಿಸಿ, ಗುರುತಿಸಿ, ಬೀಜಾಂಕುರಗೊಂಡು ಬೆಳೆಯುವಂತೆ ಮಾಡುವುದು ಒಬ್ಬ ಅನ್ವೇಷಕನಾಗಿ ನನ್ನ ಕೆಲಸ. ಒಂದು ರೀತಿಯಲ್ಲಿ ಕರ್ಮಗಳ ಮೂಲಕ ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಂಡಿರುವುದು ನಿಜವಾದರೂ, ನಿಯತಿಯನ್ನು ಅವಲಂಬಿಸುವುದು ಮತ್ತೂ ವ್ಯರ್ಥ.

ನಮ್ಮನ್ನು ಪರಿವರ್ತಿಸಿಕೊಳ್ಳುವ ತೀವ್ರಾಸಕ್ತಿಯ ಅಪೇಕ್ಷೆಯುಳ್ಳ ನಾವು, ಅಧ್ಯಾತ್ಮವು (ವಿಶೇಷವಾಗಿ ಭಾರತೀಯ ಪರಂಪರೆಯಲ್ಲಿ) ಕರ್ಮ, ಜ್ಞಾನ ಮತ್ತು ಭಕ್ತಿಯೋಗವನ್ನು ಕುರಿತು ಹೇಳುವುದನ್ನು ಕಾಣುತ್ತೇವೆ. ಹಾರ್ಟ್‌ಫುಲ್‌ನೆಸ್ ಮಾರ್ಗ ನಿಜವಾಗಲೂ ಈ ಮೂರೂ ಯೋಗಗಳ ಸೊಗಸಾದ

ಸಂಯೋಗವಾಗಿದೆ. ಆದರೂ, ಇಂತಹ ಮಾರ್ಗದಲ್ಲಿ ನಡೆಯುವಾಗ ನಾವು ಅನೇಕ ತೊಡಕುಗಳನ್ನು ಎದುರಿಸುತ್ತೇವೆ, ಏಕೆಂದರೆ ಕರ್ಮ ಮತ್ತು ಜ್ಞಾನಮಾರ್ಗಕ್ಕೆ ನಾವು ಹೆಚ್ಚು ಮಹತ್ತ್ವವನ್ನು ನೀಡುತ್ತೇವೆ. ಅವುಗಳನ್ನು ಉತ್ಪ್ರೇಕ್ಷಿಸಿದಾಗ, ಅವು ಈ ಮಾರ್ಗದ ಸೂಕ್ಷ್ಮತೆಗೆ ವಿರುದ್ಧಾತ್ಮಕವಾಗುತ್ತವೆ.

ಬ್ರಾಹ್ಮಣರು ಉನ್ನತ ಆಧ್ಯಾತ್ಮಿಕ ಸ್ಥಿತಿಯಿಂದ ಪತನ ಹೊಂದಿ ಬ್ರಹ್ಮರಾಕ್ಷಸರಾಗಿರುವುದನ್ನು ಹಾಗು ಯೋಗಿಗಳು ಪತನ ಹೊಂದಿ ಯೋಗಭ್ರಷ್ಟರಾಗಿರುವುದನ್ನು ನೀವು ಕೇಳಿರಬಹುದು. ಅವರ ಯೌಗಿಕ ಯಾತ್ರೆ ಅಗಣಿತ ಕಾರಣಗಳಿಂದ ಅಪೂರ್ಣವಾಗಿರುತ್ತದೆ. ಜ್ಞಾನಿಗಳು ಮತ್ತು ಕರ್ಮಯೋಗಿಗಳು ಪತನ ಹೊಂದಬಹುದು. ಆದರೆ ಭಕ್ತನ ಪತನವನ್ನೆಂದಾದರೂ ಕೇಳಿದ್ದೀರಾ? ಭಕ್ತನು ಪರಮಾತ್ಮನ ಆಶ್ರಯದಲ್ಲಿರುವುದರಿಂದ 'ಭಕ್ತಿಭ್ರಷ್ಟ'ನೆಂಬ ಶಬ್ದ ಅಸ್ತಿತ್ವಕ್ಕೆ ಬಾರದು. ಶರಣಾಗತಿಯನ್ನು ಸಾಧಿಸಿದ, ಅರ್ಥಾತ್ ಪ್ರತಿರೋಧಿಸಲಾಗದ ಅನುರಾಗದಿಂದ ಯಾರು ನಿಜವಾಗಲೂ ಶರಣಾಗತರಾಗಿರುವರೊ, ಅಂತಹವರನ್ನು ಪರಮಾತ್ಮನು ಕಾಯುತ್ತಾನೆ. ನಾವು 'ಕರ್ತೃ'ಗಳಾದಾಗ ಸಮಸ್ಯೆಗಳು ಆರಂಭವಾಗುತ್ತವೆ. ಯಾವ ಭಕ್ತನೂ ಆಧ್ಯಾತ್ಮಿಕ ಪತನವನ್ನು ಕಂಡಿಲ್ಲ; ಹಾಗಾಗಲು ಸಾಧ್ಯವೇ ಇಲ್ಲ. ಹಾಗಾಗುತ್ತಿರುವುದು ಕಂಡುಬಂದರೆ, ಅದು ನಿಜವಾದ ಭಕ್ತಿ ಅಥವಾ ಶರಣಾಗತಿಯ ಅಭಾವವನ್ನು ತೋರಿಸುತ್ತದೆ.



ಶರಣಾಗತಿಯನ್ನು ಸಾಧಿಸಿದ, ಅರ್ಥಾತ್ ಪ್ರತಿರೋಧಿಸಲಾಗದ ಅನುರಾಗದಿಂದ ಯಾರು ನಿಜವಾಗಲೂ ಶರಣಾಗತರಾಗಿರುವರೊ, ಅಂತಹವರನ್ನು ಪರಮಾತ್ಮನು ಕಾಯುತ್ತಾನೆ. ನಾವು 'ಕರ್ತೃ'ಗಳಾದಾಗ ಸಮಸ್ಯೆಗಳು ಆರಂಭವಾಗುತ್ತವೆ. ಯಾವ ಭಕ್ತನೂ ಆಧ್ಯಾತ್ಮಿಕ ಪತನವನ್ನು ಕಂಡಿಲ್ಲ; ಹಾಗಾಗಲು ಸಾಧ್ಯವೇ ಇಲ್ಲ.

ನಾನು ಮೊದಲ ಬಾರಿ ಸಹಜಮಾರ್ಗಕ್ಕೆ ಪರಿಚಿತನಾದಾಗ, ನನ್ನ ಪ್ರಶಿಕ್ಷಕ ಸೋದರಿ ದ್ರೌಪದಿಯವರು ನನಗೊಂದು ಮೂಲಭೂತ ಪ್ರಶ್ನೆ ಕೇಳಿದರು:
"ನೀವೇಕೆ ಧ್ಯಾನ ಮಾಡಬಯಸುತ್ತೀರಿ?"
"ನಾನು ದೇವರನ್ನು ಅರಸುತ್ತಿದ್ದೇನೆ," ಎಂದು ನಾನು ಉತ್ತರಿಸಿದೆ.

ಇಂದು, ನನ್ನ ಕೆಲವೊಂದು ವೈಯಕ್ತಿಕ ನಂಬಿಕೆಗಳನ್ನು ಅವಲೋಕಿಸಿದಾಗ, ವಿಷಯಗಳನ್ನು ನಾನೀಗ ಹೇಗೆ ಭಿನ್ನವಾಗಿ ಅರ್ಥೈಸಿಕೊಂಡಿದ್ದೇನೆ ಮತ್ತು ಹಿಂದೆ ನಾನೆಷ್ಟು ತಪ್ಪಾಗಿದ್ದೆನೆಂದು ಅರಿತುಕೊಂಡಿದ್ದೇನೆ. ನಾವು ಬಹುತೇಕರು ದೇವರನ್ನು ಅರಸುತ್ತಿದ್ದೇವೆಂದು ಹೇಳುತ್ತಿರುವುದು, ನನಗೀಗ ಹಾಸ್ಯಾಸ್ಪದವೆಂದು ತೋರುತ್ತದೆ. ಸಣ್ಣಪುಟ್ಟ ವಿಷಯಗಳು ನಮ್ಮ ಕಣ್ಣಿಗೆ ಬೀಳದಿರಬಹುದು, ಆದರೆ ವಿಶ್ವವ್ಯಾಪಿಯಾದವನನ್ನು ಅದು ಹೇಗೆ ಮರೆತಿದ್ದೇವೆ? ಅದೇ ಕಾಲಕ್ಕೆ, ತನ್ನ ಜೀವನಪರ್ಯಂತ ಸಾಗರದಲ್ಲೇ ಜೀವಿಸುವ

ನಾವು ಅವನನ್ನು ಅನ್ವೇಷಿಸಬೇಕಾದ ಪರಿಸ್ಥಿತಿಯನ್ನು ನೋಡಿದರೆ, ಮೊಟ್ಟಮೊದಲು ನಾವು ಅವನಿಂದ ಬೇರ್ಪಟ್ಟುದಾದರೂ ಹೇಗೆಂಬ ಜಟಿಲವಾದ ಗೂಢವಿಷಯ ಪರಿಹರಿಸಬೇಕಾಗಿದೆ. ಕಳೆದುಹೋದ ಆ ಸಂಪರ್ಕವನ್ನು ಮರುಸ್ಥಾಪಿಸಲು, ಪ್ರತ್ಯೇಕತೆಗೆ ಕಾರಣವಾದ ಅಂಶಗಳನ್ನು ಗುರುತಿಸಿ, ನಿವಾರಿಸಬೇಕು. ಇದು ಪ್ರಾಮಾಣಿಕ ಯಾತ್ರೆಯ ಆರಂಭ.



ಮೀನಿಗೆ ಅದರ ಕಲ್ಪನೆಯೂ ಇರದಂತೆ, ನಮಗೂ ಸಹ ಅದು ಎಲ್ಲೆಡೆಯಲ್ಲೂ ಇರುವಾಗ ನಮಗೆ ಕಾಣುವುದಿಲ್ಲ. ಪರ್ಯಾಯವಾಗಿ, ದೇವರನ್ನು ಅನಂತ ಆಯಾಮವುಳ್ಳವನೆಂದು ಕಲ್ಪಿಸಿಕೊಂಡು ಗೊಂದಲಕ್ಕೊಳಗಾಗುತ್ತೇವೆ, ಏಕೆಂದರೆ ಅತ್ಯಂತ ದೂರದಲ್ಲಿರುವ ಅಸ್ತಿತ್ವದ ಕೊನೆಯನ್ನು ನಾವು ನೋಡಿಯೂ ಇಲ್ಲ, ಗ್ರಹಿಸಲೂ ಸಾಧ್ಯವಿಲ್ಲ. ತನ್ನ ಸೂಕ್ಷ್ಮಾತಿಸೂಕ್ಷ್ಮ ಸ್ತರದಲ್ಲಿ ದೈವವು ಮತ್ತಷ್ಟು ಅಗೋಚರತೆಯನ್ನು ಅಳವಡಿಸಿಕೊಳ್ಳುತ್ತದೆ.

ನಾನು ಅವನನ್ನು ಹುಡುಕಲಾರಂಭಿಸಿದರೂ, ಅವನ ಕಡೆಯಿಂದ ಸ್ವಲ್ಪವಾದರೂ ಅನ್ವೇಷಣೆಯಿಲ್ಲದೆ ಹೋದರೆ ನನ್ನ ಸೀಮಿತ ಗ್ರಹಣದೊಂದಿಗೆ ಅನಂತವನ್ನು ಹೇಗೆ ಗ್ರಹಿಸಬಲ್ಲೆ? ಅನಂತವು ಗ್ರಹಿಕೆಗೆ ಮೀರಿದುದು. ಅದನ್ನು "ಅಣೋರಣೀಯಾನ್ ಮಹತೋ ಮಹೀಯಾನ್" ಎಂದು ಅರಿತುಕೊಳ್ಳುವುದು ಹೇಗೆ? ಆದರೂ, ಮತ್ತೊಂದು ಕಷ್ಟವೆಂದರೆ ಸ್ಥೂಲವಾದುದು ಸೂಕ್ಷ್ಮವನ್ನೆಂದಿಗೂ ಶ್ಲಾಘಿಸಲಾರದು.

ಹಾಗಾಗಿ, ಪೂಜ್ಯಭಾವ ಮತ್ತು ಬೆರಗಿನಿಂದ ಶರಣಾಗತಿಯನ್ನು ಹೊಂದುವುದೊಂದೇ ಮಾರ್ಗ:

> ವೋ ದಿಲ್ ಕಹಾಂ ಸೆ ಲಾವೂಂ, ಜೋ ತುಝೆ ಪಹಚಾನೆ!
>
> ನಿನ್ನನ್ನು ಗುರುತಿಸಬಲ್ಲ ಹೃದಯವ ನಾನೆಲ್ಲಿಂದ ತರಲಿ ?

ಇವೆಲ್ಲವುಗಳ ನಂತರವೂ, ನಾವು ಅವನನ್ನು ಅನ್ವೇಷಿಸಬೇಕಾದ ಪರಿಸ್ಥಿತಿಯನ್ನು ನೋಡಿದರೆ, ಮೊಟ್ಟಮೊದಲು ನಾವು ಅವನಿಂದ ಬೇರ್ಪಟ್ಟುದಾದರೂ ಹೇಗೆಂಬ ಜಟಿಲವಾದ ಗೂಢವಿಷಯ ಪರಿಹರಿಸಬೇಕಾಗಿದೆ. ಕಳೆದುಹೋದ ಆ ಸಂಪರ್ಕವನ್ನು ಮರುಸ್ಥಾಪಿಸಲು, ಪ್ರತ್ಯೇಕತೆಗೆ ಕಾರಣವಾದ ಅಂಶಗಳನ್ನು ಗುರುತಿಸಿ, ನಿವಾರಿಸಬೇಕು. ಇದು ಪ್ರಾಮಾಣಿಕ ಯಾತ್ರೆಯ ಆರಂಭ.

ಸಮುದ್ರತೀರದಲ್ಲಿ, ನರ್ತಿಸುತ್ತಿರುವ ಅಲೆಗಳನ್ನು ಆನಂದಿಸುತ್ತ ನೀವು ಕುಳಿತಿದ್ದೀರೆಂದು ಕಲ್ಪಿಸಿಕೊಳ್ಳಿರಿ. ಆದರೆ ಮೇಲ್ನೋಟಕ್ಕೆ ಕಾಣುವ ಅಲೆಗಳನ್ನಷ್ಟೇ ನೋಡುತ್ತಿರುವ ನೀವು ಸಾಗರದಾಳದ ನೀರನ್ನು ಕಾಣಲಾರಿರಿ. ಈ ಅಲೆಗಳೂ ಕೂಡ, "ಸಾಗರವೆಲ್ಲಿದೆ?" ಎಂದು ಕೇಳುತ್ತಿರುತ್ತವೆ. ಅವುಗಳೂ ಸಹ ತಮ್ಮ ಅನ್ವೇಷಣೆಯಲ್ಲಿ ತಳಮಳಗೊಂಡಿರುತ್ತವೆ. ಅವು ನಿಧಾನಿಸಿ, ನಿಶ್ಚಲಗೊಂಡಾಗ ಮೇಲ್ಮೈಯ ಅಲೆಗಳು ಸಾಗರದೊಂದಿಗೆ ಒಂದಾಗಿ ಸ್ಪಷ್ಟತೆ ಕಾಣುತ್ತದೆ.

ಸಾಗರವೇ ತಮ್ಮ ಮೂಲ, ತಾವು ಅದರಿಂದಲೇ ಉಗಮವಾಗಿ, ಪುನಃ ಅಲ್ಲಿಯೇ ಲಯವಾಗುತ್ತೇವೆಂಬುದನ್ನು ಅಲೆಗಳು ಮರೆಯುತ್ತವೆ. ಸಾಗರ ಮತ್ತು ಅಲೆಗಳು ಒಂದಾಗಲು ವಿಲಂಬಗತಿ, ನಿಲುಗಡೆ ಹಾಗು ನಿಶ್ಚಲಗೊಳ್ಳುವುದೇ ಕೀಲಿಕೈ. ಅಂತಿಮ ಸಮಾಪ್ತಿಯೆಂದರೆ ಮೃತ್ಯು. ಆದ್ದರಿಂದ, ಕನಿಷ್ಠಪಕ್ಷ ನಾವು ಮೃತ್ಯುವಿನ ಲಕ್ಷಣಗಳನ್ನು ಅನುಕರಿಸುತ್ತ, ಅವುಗಳನ್ನು ಅಂತರ್ಗತಗೊಳಿಸಿಕೊಂಡು ಜೀವನ್ಮೃತ ಸ್ಥಿತಿ ಪಡೆದರೆ, ನಮ್ಮ ಹೃದಯಗಳಲ್ಲಿ ತನ್ನಿಂತಾನೇ ಸ್ವೀಕಾರಭಾವ ಉತ್ಪತ್ತಿಯಾಗುತ್ತದೆ. ಈಗ, ಮೂಲಸಾಗರದೊಂದಿಗೆ ಐಕ್ಯವಾಗುವ, ಮಂಗಳಕರ ಸಮಯ ಆರಂಭವಾಗುತ್ತದೆ. ಈ ಸ್ಥಿತಿಯು ಸಮಾಧಿಯ ಮೂಲ ಅವಸ್ಥೆಗೆ ಸಮಾನವಾಗಿರುತ್ತದೆ. ಶಾರೀರಿಕ ಮೃತ್ಯುವಿನಿಂದ ಸಮಸ್ಯೆ ಬಗೆಹರಿಯದು. ವಾಸ್ತವದಲ್ಲಿ, ಸಮಸ್ಯೆ ನಮ್ಮ ಸೂಕ್ಷ್ಮಶರೀರಗಳೊಂದಿಗೆ ಅಜ್ಞಾತಸ್ಥಿತಿಯಲ್ಲಿ ಉಳಿದುಕೊಂಡು ಅನಂತಕಾಲದವರೆಗೂ [ಜನನ–ಮರಣಗಳ] ಪುನರ್ಜನ್ಮ ಮುಂದುವರಿಯುತ್ತದೆ.

ಪ್ರಿಯತಮನ ಪ್ರೇಮದಲ್ಲಿ ತಾನು ಮುಳುಗಿ ಅಂತ್ಯಗೊಳ್ಳುವ ಕಲೆಯೇ ಭಕ್ತಿ. ನಮ್ಮನ್ನು ನಾವು ಮೀರಿದಾಕ್ಷಣವೇ ಪರಿಹಾರ ಕಂಡುಬರುತ್ತದೆ.

> ಜಬ್ ಮೈ ಥಾ ತಬ್ ಹರೀ ನಹೀ, ಅಬ್ ಹರಿ ಹೈ ಮೈ ನಾಹೀ,
> ಸಬ್ ಅಂಧಿಯಾರಾ ಮಿಟ್ ಗಯಾ, ದೀಪಕ್ ದೇಖಾ ಮಾಹೀ॥
>
> ನಾನಿದ್ದಾಗ ಹರಿಯಿಲ್ಲ; ಹರಿ ಇರುವನೀಗ ನಾನಿಲ್ಲ,
> ಹೃದಯ ದೀಪ್ತಿಯ ಕಾಣಲು ನಾನು, ಕತ್ತಲೆ ಅಳಿಯಿತಲ್ಲ॥

'ನಾನು' ಎಂಬ ಮಾಯೆಯ ಅಂಧಕಾರವೇ ಪರಮಾತ್ಮನನ್ನು ಕಾಣಲು ತಡೆಯೊಡ್ಡುತ್ತಿದೆ. ಆತನು ಹೃದಯದಲ್ಲಿ ರಾರಾಜಿಸುವಾಗ, ಅಲ್ಲಿ ಪ್ರಕಾಶವೊಂದೇ ಇರುತ್ತದೆ ಮತ್ತು ನಮ್ಮ ಸ್ವಂತ ಉಪಸ್ಥಿತಿಯ ಅಂಧಕಾರ ಇಲ್ಲದಾಗುತ್ತದೆ.

ಸಂಪೂರ್ಣ ದೈವೀಕರಣವೇ ಅರಿವಿನ ಅಂತಿಮ ಸೀಮಾರೇಖೆ. ಅರಿವಿನ ಉತ್ತುಂಗ–ಆಳಗಳು ಪ್ರಜ್ಞಾಸಾಗರದಲ್ಲಿಯೇ ಕಾಣಸಿಗುತ್ತವೆ. ನಾವು ಇದಿಷ್ಟನ್ನು ಅರ್ಥಮಾಡಿಕೊಂಡರೆ, ಪ್ರಿಯ



ಕನಿಷ್ಠಪಕ್ಷ ನಾವು ಮೃತ್ಯುವಿನ ಲಕ್ಷಣಗಳನ್ನು ಅನುಕರಿಸುತ್ತ, ಅವುಗಳನ್ನು ಅಂತರ್ಗತಗೊಳಿಸಿಕೊಂಡು ಜೀವನ್ಮೃತ ಸ್ಥಿತಿ ಪಡೆದರೆ, ನಮ್ಮ ಹೃದಯಗಳಲ್ಲಿ ತನ್ನಿಂತಾನೇ ಸ್ವೀಕಾರಭಾವ ಉತ್ಪತ್ತಿಯಾಗುತ್ತದೆ. ಈಗ, ಮೂಲಸಾಗರದೊಂದಿಗೆ ಐಕ್ಯವಾಗುವ, ಮಂಗಳಕರ ಸಮಯ ಆರಂಭವಾಗುತ್ತದೆ. ಈ ಸ್ಥಿತಿಯು ಸಮಾಧಿಯ ಮೂಲ ಅವಸ್ಥೆಗೆ ಸಮಾನವಾಗಿರುತ್ತದೆ.

ಬಾಬೂಜಿಯವರ, "ಈ ಪ್ರಜ್ಞೆಯನ್ನು ಯಾವುದು ಬೆಂಬಲಿಸುತ್ತದೆ?" ಎಂಬ ಸೂಕ್ಷ್ಮಪ್ರಶ್ನೆಯ ನಿಜಾರ್ಥವನ್ನು ಅರಿತುಕೊಳ್ಳುತ್ತೇವೆ. ಪ್ರೇಮ ಮತ್ತು ಉದಾತ್ತತೆಯನ್ನು ನಿರಾಕರಿಸಿದಾಗ ಮಾತ್ರವೇ ನಾವು ನಮ್ಮ ಅಸ್ತಿತ್ವದ ಔನ್ನತ್ಯ ಹಾಗು ಅಂತರಾಳ ನಮ್ಮ ದೃಷ್ಟಿಯಿಂದ ಮರೆಯಾಗುತ್ತವೆ, ಮತ್ತು ನಮ್ಮಲ್ಲಿ ಕೇವಲ ಅರಿವಿನ ಕಿರುವ್ಯಾಪ್ತಿಯಷ್ಟೇ ಉಳಿಯುತ್ತದೆ.

ಯಾರು ತಮ್ಮ ಆಂತರಿಕ ದಿಕ್ಸೂಚಿಯನ್ನು ಕಳೆದುಕೊಂಡಿರುವರೊ ಅಥವಾ ಯಾರ ಆಂತರಿಕ ದಿಕ್ಸೂಚಿ ದೈವತ್ವದ ಸಂಪೂರ್ಣ ವಿರುದ್ಧ ದಿಕ್ಕನ್ನು ಸೂಚಿಸುತ್ತಿರುವುದೊ, ಅಂತಹವರಿಗಿಂತ ತುಚ್ಛರು (ನಿರ್ಭಾಗ್ಯ, ಏಕಾಂಗಿ, ಅಲ್ಪ) ಮತ್ತಾರೂ ಇಲ್ಲ. ಪ್ರಿಯತಮನಲ್ಲಿನ ತೀವ್ರ ಪ್ರೇಮವೆನಿಸಿದ ಭಕ್ತಿಯು, ಇರುವಿಕೆ ಮತ್ತು ಆಗುವಿಕೆಯ ಭಾವನಾತ್ಮಕ ಏರಿಳಿತಗಳನ್ನು ಪರಿಷ್ಕರಿಸಿ, ದೈವತ್ವ-ಸಮಾನ ಏಕರೂಪತೆಗೆ ತರುತ್ತದೆ. ತದ್ವಿರುದ್ಧವಾಗಿ, ಪ್ರಿಯತಮನ ಅರಿವಿನಿಂದ ದೂರವಾಗುವುದು ದುಃಖ, ಕ್ಲೇಶಗಳನ್ನು ತರುತ್ತದೆ.


ಪ್ರಿಯತಮನಲ್ಲಿನ ತೀವ್ರ ಪ್ರೇಮವೆನಿಸಿದ ಭಕ್ತಿಯು, ಇರುವಿಕೆ ಮತ್ತು ಆಗುವಿಕೆಯ ಭಾವನಾತ್ಮಕ ಏರಿಳಿತಗಳನ್ನು ಪರಿಷ್ಕರಿಸಿ, ದೈವತ್ವ-ಸಮಾನ ಏಕರೂಪತೆಗೆ ತರುತ್ತದೆ. ತದ್ವಿರುದ್ಧವಾಗಿ, ಪ್ರಿಯತಮನ ಅರಿವಿನಿಂದ ದೂರವಾಗುವುದು ದುಃಖ, ಕ್ಲೇಶಗಳನ್ನು ತರುತ್ತದೆ.



ಯಹೂದಿ ಸಂಪ್ರದಾಯದಲ್ಲಿ, ಯಾವುದು ಪೂಜನೀಯವೊ ಅದರಿಂದ ಪಥಭ್ರಷ್ಟರಾಗುವುದು 'ಪಾಪ' ಎಂಬ ವ್ಯಾಖ್ಯಾನ ಸುಸ್ಪಷ್ಟವಾಗಿದೆ. ಕೃತಘ್ನತೆಯೇ ಪಾಪವೆಂದು ಬಾಬೂಜಿಯವರು ಹೇಳುತ್ತಾರೆ. ನಾವು ಕೃತಘ್ನರಾದಾಕ್ಷಣವೇ ನಿಜವಾದ ಸಂಬಂಧದಿಂದ ವಿಪಥಗೊಳಿಸುವ ಅನೇಕ ದುರ್ಮಾರ್ಗಗಳು ಕವಲೊಡೆಯತೊಡಗುತ್ತವೆ. ಕೃತಘ್ನತೆ ದುರ್ಮಾರ್ಗದ ಆರಂಭ; ಆದುದರಿಂದಲೆ ಅದು ಪಾಪವೆನಿಸಿದೆ. ಈಗ ಪ್ರೇಮವಿಲ್ಲವಾಗಿ, ಸಂಬಂಧ ಮುರಿದುಬೀಳುತ್ತದೆ. ಸಂಬಂಧವನ್ನು ಕೊನೆಗೊಳಿಸಿ ನೀವು ಹೋಗುವುದಾದರೂ ಎಲ್ಲಿಗೆ? ಒಂದು ಅಲೆಗೆ, "ಪ್ರಿಯವಾದ ಬಲಿಷ್ಠ ಅಲೆಯೆ, ಈ ಸಾಗರದಿಂದ ದೂರ ಎಲ್ಲಿ ಹೋಗುವೆ?" ಎಂದು ಕೇಳುವುದನ್ನು ಕಲ್ಪಿಸಿಕೊಳ್ಳಿ.

ಈ ದೃಷ್ಟಿಕೋನದಿಂದ ನೋಡಿದರೆ, ಪ್ರಾಪಂಚಿಕ ವಸ್ತುಗಳು, ದೇಹ, ಮನಸ್ಸು, ಬುದ್ಧಿ ಮತ್ತು ಅಹಂಕಾರದೊಂದಿಗೆ ನಮ್ಮ ಅರಿವು ಗುರುತಿಸಿಕೊಳ್ಳುವ ಯಾವುದೇ ಪಥಚ್ಯುತಿಯೂ, ಜೀವನದ ಮೂಲವಾದ ಕೇಂದ್ರದಿಂದ, ಅಂದರೆ ನಮ್ಮ ಆತ್ಮನಿಂದ ದೂರವಾಗುವುದಕ್ಕೆ ಸಮಾನವಾಗಿದೆ. ಮಾಯೆ

ಹಾಗು ಅಹಂನೊಡನೆ ಆತ್ಮನು ಗುರುತಿಸಿಕೊಳ್ಳುವಿಕೆಯ ಇಪ್ಪತ್ತೂರು ವೃತ್ತಗಳನ್ನು ಬಾಬೂಜಿಯವರು ಸಾಂಖ್ಯ ಶೈಲಿಯ ಚಿತ್ರಗಳಲ್ಲಿ ಸರಳವಾಗಿ ನಿರೂಪಿಸಿದ ಸೊಗಸನ್ನು ನಾವು ಕಾಣಬಹುದು. ಈ ಚಿತ್ರದಲ್ಲಿ, ಮಾಯೆಯ ವೃತ್ತಗಳು ಕೇವಲ ಐದು ಮಾತ್ರ, ಅಹಂಕಾರಕ್ಕಾದರೋ ಹನ್ನೊಂದು ವೃತ್ತಗಳು. ಕೇಂದ್ರದಿಂದ ಪರಿಧಿಯೆಡೆಗೆ ನಮ್ಮನ್ನು ಎಳೆದೊಯ್ಯುತ್ತಿರುವುದು ಅಹಂಕಾರವೇ ಎಂಬುದು ಇದರಿಂದ ತಿಳಿಯುವುದು. ಅಹಂಕಾರವು ಮಾಯೆಗಿಂತ ಅತಿ ಹೆಚ್ಚು ಶಕ್ತಿಶಾಲಿಯಾದ ಅಡ್ಡಿಯಾಗಿದೆ. ಅದೊಂದು ಬಗೆಯ ಭ್ರಾಂತಿ.




ಮುಕ್ತಿ ಮಾರ್ಗದೆಡೆಗೆ

ಪತಂಜಲಿ ಋಷಿ ಇದನ್ನು ಭ್ರಾಂತಿದರ್ಶನವೆನ್ನುತ್ತಾರೆ, ಅರ್ಥಾತ್ ತಪ್ಪುಗ್ರಹಿಕೆ. ನಾನು ಐಹಿಕ ವಸ್ತುಗಳ ಅರ್ಜನೆಯ ವಿರೋಧಿಯಲ್ಲ, ಆದರೆ ಬಾಹ್ಯ ಸಂಪತ್ತು ಮತ್ತು ಆಸ್ತಿ-ಪಾಸ್ತಿಗಳೊಂದಿಗೆ ನಮ್ಮನ್ನು ಗುರುತಿಸಿಕೊಳ್ಳುವುದು, ಆಂತರಿಕ ದಾರಿದ್ರ್ಯದ ಲಕ್ಷಣ. ಇಂತಹ ಸಂಪತ್ತು ಕೇವಲ ಭ್ರಾಂತಿಯನ್ನು, ಅಂದರೆ ಅಸುರಕ್ಷಾ ಭಾವವನ್ನು ಸೃಷ್ಟಿಸುತ್ತದೆ. ಈ ಗುರುತಿಸಿಕೊಳ್ಳುವಿಕೆಯಿಂದಾದ ಭ್ರಮೆಯಲ್ಲಿಯೇ ಜೀವನ ಸಾಗುತ್ತದೆ. ನಮ್ಮಲ್ಲಿ ಉತ್ತಮೋತ್ತಮರೂ ಈ ಸತ್ಯವನ್ನು ಅರಿತುಕೊಳ್ಳಲು ಅಸಮರ್ಥರಾಗಿದ್ದಾರೆ.

ಮಾಯೆ, ಮೌಢ್ಯ, ಅಂಧಕಾರ ಮತ್ತು ಅಜ್ಞಾನದ ನೆರಳಿನಲ್ಲಿ ಜೀವಿಸುವುದು ನರಕವಾಸದಂತೆ; ಅದಕ್ಕೆ ವಿರುದ್ಧವಾಗಿ, ಸ್ಪಷ್ಟತೆ, ಮುಗ್ಧತೆ ಮತ್ತು ಉಲ್ಲಾಸದಿಂದ ಜೀವಿಸುವುದು ಸ್ವರ್ಗವಾಸದಂತೆ. ಇದೇ ಭಕ್ತಿ ಹಾಗು ಅದರ ನಂತರ ಸಂಭವಿಸುವುದೆಲ್ಲದರ ಸೊಗಸು. ನಾವು ಅಂಧಕಾರದಲ್ಲಿನ ಜೀವನದಿಂದ ಬೇಸತ್ತಾಗ, ಅಪ್ಪಟ ಹತಾಶೆಯಿಂದ, "ಇನ್ನು ಮುಂದೆ ಆಂತರೀಕರಣಕ್ಕೆ ನೆರವಾಗುವ ಜೀವನಶೈಲಿಯನ್ನು ಅಳವಡಿಸಿಕೊಳ್ಳುತ್ತೇನೆ," ಎಂದು ಘೋಷಿಸುತ್ತೇವೆ.

ಇದು ಸಾಗರದ ಮೇಲ್ಮೈನ ಅಲೆಗಳು ಅಂತ್ಯಗೊಳ್ಳುವ ಆರಂಭ. ಅನೇಕ ರೀತಿಯ ಬೇಡಿಕೆಗಳನ್ನು ಪೂರೈಸುವಾಗ ಎದುರಾಗುವ ನಿತ್ಯದ ಘರ್ಷಣೆಗಳು ಒಂದು ಬಗೆಯ ತಪಸ್ಸೇ ಆಗಿಬಿಡುತ್ತವೆ. ಹಾಗೇನಾದರೂ ಅದು ತಪಸ್ಸಾದರೆ, ಆಗ ನಾವು ಖಂಡಿತವಾಗಿಯೂ ನಮ್ಮ ಕರ್ತವ್ಯಗಳ ಪೂರೈಸುವಿಕೆಯಿಂದ, ಪ್ರಿಯತಮನಿಗಾಗಿ ಪ್ರೇಮಪೂರ್ವಕವಾಗಿ ಕರ್ತವ್ಯವನ್ನು ಪೂರೈಸುವ ಮಟ್ಟಕ್ಕೆ ಬೆಳೆಯುತ್ತೇವೆ. ಇದೇ ಪಥವು ಪರಿಶುದ್ಧ ಭಕ್ತಿಯಾಗಿ ಪರಿಪಕ್ವಗೊಳ್ಳುತ್ತದೆ.

ಮಾಯೆ, ಮೌಢ್ಯ, ಅಂಧಕಾರ ಮತ್ತು ಅಜ್ಞಾನದ ನೆರಳಿನಲ್ಲಿ ಜೀವಿಸುವುದು ನರಕವಾಸದಂತೆ; ಅದಕ್ಕೆ ವಿರುದ್ಧವಾಗಿ, ಸ್ಪಷ್ಟತೆ, ಮುಗ್ಧತೆ ಮತ್ತು ಉಲ್ಲಾಸದಿಂದ ಜೀವಿಸುವುದು ಸ್ವರ್ಗವಾಸದಂತೆ. ಇದೇ ಭಕ್ತಿ ಹಾಗು ಅದರ ನಂತರ ಸಂಭವಿಸುವುದೆಲ್ಲದರ ಸೊಗಸು.



ಭಕ್ತಿಯೆಂದರೆ, ಅರಿವಿನ ಪ್ರಕಾಶದಲ್ಲಿ ಜೀವನವನ್ನು ನಡೆಸುವುದು, ಜೀವನದ ಎಲ್ಲ ವೈರುಧ್ಯಗಳನ್ನು ಸಂಪೂರ್ಣ ಅರಿವಿನೊಂದಿಗೆ, ಸ್ವೀಕಾರಭಾವದಿಂದ ಅನುಭವಿಸುವುದು. ಧ್ಯಾನ ಕೇವಲ ಮಾನಸಿಕ ಕ್ರಿಯೆಯಾಗಿರದೆ, ದೇಹ-ಮನಸ್ಸುಗಳನ್ನು ಮೀರಿದ ವಿಷಯವಾಗಿದೆ. ಅನೇಕ ಬಗೆಯ ಚಿತ್ತಚಾಂಚಲ್ಯಗಳಿಂದ ತಮ್ಮ ಧ್ಯಾನಭಂಗವಾಗುವುದೆಂದು ಅನೇಕರು ದೂರುತ್ತಾರೆ. ಆದರೆ ಭಕ್ತಿಯಿಂದ ಮಾಡಿದ ಧ್ಯಾನದಲ್ಲಿ, ಮನಸ್ಸು ಅರಿಯುವಿಕೆ ಹಾಗು ಉದ್ವೇಗದಿಂದ ಉಂಟಾದ ಪೂರ್ವಗ್ರಹಗಳಿಂದ ಮುಕ್ತವಾಗಿರುವ ಕಾರಣ, ನಾವು ಅಧಿಕ ನಿಖರತೆಯಿಂದ 'ಅಗೋಚರ'ವನ್ನು ಗ್ರಹಿಸುವಂತೆ ಮಾಡುತ್ತದೆ. ಅನೇಕ ಬಗೆಯ ಚಿತ್ತಚಾಂಚಲ್ಯಗಳ ಪರಿಣಾಮವೇ ಪ್ರಲೋಭನೆಗಳು. 'ಸಂಸ್ಕಾರಗಳು'ಎನ್ನುವ ಉಪಾಧಿಗಳ ಪರಿಣಾಮವೇ ಚಿತ್ತಚಾಂಚಲ್ಯಗಳು.

ಸಂಸ್ಕಾರಗಳನ್ನು ನಿಧಾನವಾಗಿ ಬಿಡುಗಡೆಗೊಳಿಸುತ್ತ ಮನಸ್ಸನ್ನು ಪಳಗಿಸುವುದು ಬಲು ನಿಧಾನಗತಿಯ ಪ್ರಕ್ರಿಯೆ. ಸಂಸ್ಕಾರಗಳು ನಿಧಾನವಾಗಿ ಆಂತರಿಕ ಅವಕಾಶವನ್ನು ಮಾಡಿಕೊಡುತ್ತಿದ್ದಂತೆ, ನಮ್ಮನ್ನು ನಾವು ಆಂತರಿಕ ಪರಿಸ್ಥಿತಿಗೆ ಹೊಂದಿಸಿಕೊಳ್ಳಲು ಬಹಳ ಸಮಯ ತೆಗೆದುಕೊಳ್ಳುತ್ತೇವೆ. ಆಗ ನಮಗೆ ನೋವನ್ನು ಸಹಿಸಿಕೊಳ್ಳುವುದು ಮಾತ್ರವೇ ಅಲ್ಲ, ಸಂತೋಷವನ್ನು ಸಹಿಸಿಕೊಳ್ಳುವುದಕ್ಕೂ ಮಿತಿಯಿದೆ ಎಂಬುದು ಅರಿವಾಗುತ್ತದೆ.



ಭಕ್ತಿಯೆಂದರೆ, ಅರಿವಿನ ಪ್ರಕಾಶದಲ್ಲಿ ಜೀವನವನ್ನು ನಡೆಸುವುದು, ಜೀವನದ ಎಲ್ಲ ವೈರುಧ್ಯಗಳನ್ನು ಸಂಪೂರ್ಣ ಅರಿವಿನೊಂದಿಗೆ, ಸ್ವೀಕಾರಭಾವದಿಂದ ಅನುಭವಿಸುವುದು. ಧ್ಯಾನ ಕೇವಲ ಮಾನಸಿಕ ಕ್ರಿಯೆಯಾಗಿರದೆ, ದೇಹ–ಮನಸ್ಸುಗಳನ್ನು ಮೀರಿದ ವಿಷಯವಾಗಿದೆ. ಅನೇಕ ಬಗೆಯ ಚಿತ್ತಚಾಂಚಲ್ಯಗಳಿಂದ ತಮ್ಮ ಧ್ಯಾನಭಂಗವಾಗುವುದೆಂದು ಅನೇಕರು ದೂರುತ್ತಾರೆ. ಆದರೆ ಭಕ್ತಿಯಿಂದ ಮಾಡಿದ ಧ್ಯಾನದಲ್ಲಿ, ಮನಸ್ಸು ಅರಿಯುವಿಕೆ ಹಾಗು ಉದ್ವೇಗದಿಂದ ಉಂಟಾದ ಪೂರ್ವಗ್ರಹಗಳಿಂದ ಮುಕ್ತವಾಗಿರುವ ಕಾರಣ, ನಾವು ಅಧಿಕ ನಿಖರತೆಯಿಂದ 'ಅಗೋಚರ'ವನ್ನು ಗ್ರಹಿಸುವಂತೆ ಮಾಡುತ್ತದೆ.

ನಮ್ಮ ಸಾಧನೆಗೆ ಹಾಗು ಆ ಸಾಧನೆಯನ್ನು ನಮಗೆ ನೀಡಿದವರಿಗೆ ಸಂಬಂಧಿಸಿದಂತೆ, ಸಂತೋಷ ಅಥವಾ ದುಃಖದ ಸ್ಥಿತಿ ಪ್ರಾಪ್ತಿಯಾಗುವುದು ಸಹಜವಾಗಿಯೆ ಸಂಕೀರ್ಣತೆಯಿಂದ ಅಂತರ್ಗತವಾಗಿದ್ದು, ವೈವಿಧ್ಯಮಯವಾಗಿದೆ. ನಮ್ಮ ಇಚ್ಛೆಗಳನ್ನು ಪೂರೈಸುವವರೆಗೂ ನಾವು ಹೆಚ್ಚಿನ ಶ್ರದ್ಧೆಯನ್ನು ಬೆಳೆಸಿಕೊಳ್ಳುತ್ತೇವೆ. ಯಾವುದಾದರೂ ಇಚ್ಛೆಯು ಗಣನೀಯ ಸಮಯದವರೆಗೆ ಸರತಿ ಸಾಲಿನಲ್ಲಿಯೆ ಕಾಯುತ್ತಿದ್ದರೆ, ನಾವು ಸಂಸ್ಥೆ, ಪದ್ಧತಿ ಅಥವಾ ಗುರುವಿನ ಮೇಲೆ ನಂಬಿಕೆ ಕಳೆದುಕೊಳ್ಳಲಾರಂಭಿಸುತ್ತೇವೆ. ನಾನಿದನ್ನು ದಿನಂಪ್ರತಿ ನೋಡುತ್ತೇನೆ. ಉದಾಹರಣೆಗೆ, ಒಬ್ಬ ಅಭ್ಯಾಸಿಯು, "ದಾಜಿ, ನನ್ನ ಪರಿಸ್ಥಿತಿ ಬಲು ಚೆನ್ನಾಗಿದೆ. ನಿಮ್ಮ ಕೃಪೆಯಿಂದ ನನ್ನ ಮಗಳ ವಿವಾಹವಾಯಿತು, ಮತ್ತು ನಾನೀಗ ಸಂಪೂರ್ಣ ಸ್ವತಂತ್ರನಾಗಿದ್ದೇನೆ. ನನಗೆ ಯಾವುದೇ ಚಿಂತೆಯಿಲ್ಲ, ಹಾಗು ನಾನು ಜೀವನಪರ್ಯಂತ ನಿಮ್ಮ ಸೇವೆಯಲ್ಲಿರಲು ತೀರ್ಮಾನಿಸಿದ್ದೇನೆ." ಎಂದು ಬರೆದರು. ಕೆಲವು ವಾರಗಳ ನಂತರ ಅದೇ ವ್ಯಕ್ತಿ, ನಾನು ಪಕ್ಷಪಾತಿಯೆಂದೂ ಸಹ ಆರೋಪಿಸಿ ದೂರಿದರು! ಈ ಗೋಜಲಿಗೆ ಈ ರೀತಿಯ ಜ್ಞಾನೋದಯಕ್ಕೆ ಕಾರಣವೇನೆಂದು ನಾನು ವಿಚಾರಿಸಿದಾಗ ಅವರು ಕಟುವಾಗಿ, "ನನ್ನ ಪತ್ನಿಗೆ ಅನಾರೋಗ್ಯವಾದಾಗ ನೀವು ಆಕೆಗೆ ನೆರವಾಗಲಿಲ್ಲ. ಆಕೆ ಇನ್ನಿಲ್ಲ. ನಾನು ಹೃದಯ ತುಂಬಿ ನಿಮ್ಮನ್ನು ಪ್ರಾರ್ಥಿಸಿದ್ದೆ; ಏನಾಯಿತು ನೀವೇ ನೋಡಿ. ಈಗ ನನಗೆ ನಂಬಿಕೆಯೆ ಹೊರಟುಹೋಗಿದೆ, ನನಗೆ ಧ್ಯಾನ ಮಾಡಲಾಗುತ್ತಿಲ್ಲ. ಬಾಬೂಜಿ ಇದ್ದರೆ ಚೆನ್ನಾಗಿತ್ತು. ಅವರು ಖಂಡಿತವಾಗಿಯೂ ನನ್ನ ಪತ್ನಿಯನ್ನು ಗುಣಪಡಿಸುತ್ತಿದ್ದರು."

ಇಂತಹ ಪರಿಸ್ಥಿತಿಗಳನ್ನು ದಿನಂಪ್ರತಿ ಎದುರಿಸುವ ಕಾರಣ, ನಾರದ ಭಕ್ತಿ ಸೂತ್ರದ 54ನೇ ಸೂತ್ರ ನೀಡುವ ಅರಿವನ್ನು ನಾವು ನಿಜವಾಗಲೂ ಮೆಚ್ಚಬಹುದು:

ಗುಣ–ರಹಿತಂ ಕಾಮನಾ–ರಹಿತಂ ಪ್ರತಿಕ್ಷಣ ವರ್ಧಮಾನಂ,
ಅವಿಚ್ಛಿನ್ನಂ ಸೂಕ್ಷ್ಮತರಂ ಅನುಭವರೂಪಂ ।
(ನಾರದ ಭಕ್ತಿಸೂತ್ರ 54)

ಭಕ್ತಿಯು ಭೌತಿಕ ಲಕ್ಷಣ ಮತ್ತು ಇಂದ್ರಿಯಭೋಗಗಳಿಂದ ಹೊರತಾದುದು.
ಅತಿಸೂಕ್ಷ್ಮವಾದ ಇದು ಸದಾ ಪ್ರವರ್ಧಿಸುತ್ತಲೇ ಇರುವುದು ಹಾಗು ಅನುಭವಸಾಧ್ಯವಾದುದು.

ಪುರಸ್ಕಾರದ ಅಭಾವ ಅಥವಾ ಅಧಿಕ ಪುರಸ್ಕಾರದ ಪರಿಣಾಮವಾಗಿ ಭಕ್ತಿ ಡೋಲಾಯಮಾನವಾಗದು. ಅದು ಎಲ್ಲ ಪರಿಸ್ಥಿತಿಗಳಲ್ಲೂ ವೃದ್ಧಿಸುತ್ತದೆ. ಅದು ನಿಮ್ಮ ಸಂಗಾತಿ ಅಥವಾ ಮಕ್ಕಳೊಂದಿಗಿನ ಬಾಂಧವ್ಯವನ್ನು ಅನುಭವಿಸಲು ಅಡ್ಡಿಯುಂಟುಮಾಡುವುದಿಲ್ಲ. ಭಕ್ತನಿಗೆ ವಿಪತ್ತುಗಳು ಪದೇ ಪದೇ ಕಾಡುತ್ತಿರುವಾಗ, ಆತ ಅದನ್ನು ಮನಃಪೂರ್ವಕವಾಗಿ ಹಾಗು ಕೃತಜ್ಞತೆಯಿಂದ ಸ್ವೀಕರಿಸುತ್ತಾನೆ. ಭಕ್ತಿಯೆಂದಿಗೂ ನಿಯಮಾಧೀನವಾಗದು. ಅದು ಮನಸ್ಸು–ಹೃದಯಗಳೆರಡನ್ನೂ ಹಾಗು ತರ್ಕ–ಭಾವನೆಗಳೆರಡನ್ನೂ ಮೀರಿದುದು. ಪರಿಶುದ್ಧ ಪ್ರಜ್ಞೆಯನ್ನು ಹೊಂದಿ ಜೀವನೋದ್ಧಾರಕ್ಕೆ ಕಾರಣವಾಗುವ ಏಕೈಕ ಅಂಶವೆಂದರೆ, ಅದು ಭಕ್ತಿ.

ಪ್ರೇಮವು ಭಕ್ತನ ವಿಶೇಷ ಅಧಿಕಾರವಾಗಿದೆ. ಪ್ರೇಮವೆಂದರೆ ನೀಡುವುದು. ಅನುಕಂಪವು ನೀಡುವಿಕೆಗೆ ಸಂಬಂಧಿಸಿದುದು. ಅದಕ್ಕೆ ಪ್ರತಿಯಾಗಿ, ಮೋಹವೆಂದರೆ ಕಿತ್ತುಕೊಳ್ಳುವುದು, ಮತ್ತೊಬ್ಬರನ್ನು ದುರುಪಯೋಗ ಪಡಿಸಿಕೊಳ್ಳುವುದು. ಅನುಕಂಪ ತೋರುವ ಹೃದಯಕ್ಕೆ ಪ್ರತೀಕ್ಷೆ ಮಾಡುವುದು ಹೇಗೆಂದು ತಿಳಿದಿರುತ್ತದೆ; ಆದರೆ ಭಾವೋದ್ರಿಕ್ತ ವ್ಯಕ್ತಿಗೆ ಕಾಯುವಷ್ಟು ವ್ಯವಧಾನವಿರುವುದಿಲ್ಲ. ಆದ್ದರಿಂದ, ಕಲಿಯುಗವಾಗಿರಲಿ, ಸತ್ಯಯುಗವಾಗಿರಲಿ, ಮೋಹದ ಸೆಳೆತಕ್ಕೆ ಸಿಲುಕಿದ ವ್ಯಕ್ತಿ ತನ್ನನ್ನೇ ತಾನು ನಂಬಲಾರನು ಎಂಬುದು ಶಾಶ್ವತ ಸತ್ಯವೆಂದು ನಾವು ಖಚಿತವಾದ ನಿರ್ಧಾರಕ್ಕೆ ಬರಬಹುದು. ಪ್ರೇಮವಿನ್ನೂ ವೃದ್ಧಿಸುತ್ತಿರುವ ವ್ಯಕ್ತಿಗೆ ನಂಬಿಕೆಯ ಬಗ್ಗೆ ಖಚಿತತೆ ಇರುವುದಿಲ್ಲ; ಆತನು ಕೆಲವೊಮ್ಮೆ ತನ್ನನ್ನು ನಂಬುವುದು, ಕೆಲವೊಮ್ಮೆ ಇತರರನ್ನು ನಂಬುವುದು (ಅಂದರೆ, ಕೆಲವೊಮ್ಮೆ ತನ್ನನ್ನು ನಂಬದೆ, ಕೆಲವೊಮ್ಮೆ ಇತರರನ್ನು ನಂಬದೆ ಇರಬಹುದು). ಭಕ್ತಿಪರವಶನಾಗಿರುವ ಹಾಗು ಪರಮಾತ್ಮನ ಮೇಲೆ ಸಂಪೂರ್ಣ ವಿಶ್ವಾಸವನ್ನಿರಿಸಿದ ವ್ಯಕ್ತಿ, ಪರಮಾತ್ಮನನ್ನು ನಂಬುತ್ತಾನೆ. ಇಂತಹ ಅನುರಕ್ತಿ ಉದಾತ್ತವಾಗಿಯೂ, ಉದ್ಧರಿಸುವಂತಹುದೂ ಆಗಿರುವುದು. ಭಕ್ತನ ವಿಶ್ವಾಸದಲ್ಲಿ ಇಳಿಕೆಯೆಂದೂ ಕಾಣದು, ಅದು ಸದಾ ಹೆಚ್ಚುತ್ತಲೇ ಇರುತ್ತದೆ.

ಭಕ್ತಿಪರವಶನಾಗಿರುವ ಹಾಗು ಪರಮಾತ್ಮನ ಮೇಲೆ ಸಂಪೂರ್ಣ
ವಿಶ್ವಾಸವನ್ನಿರಿಸಿದ ವ್ಯಕ್ತಿ, ಪರಮಾತ್ಮನನ್ನು ನಂಬುತ್ತಾನೆ. ಇಂತಹ ಅನುರಕ್ತಿ
ಉದಾತ್ತವಾಗಿಯೂ, ಉದ್ಧರಿಸುವಂತಹುದೂ ಆಗಿರುವುದು. ಭಕ್ತನ
ವಿಶ್ವಾಸದಲ್ಲಿ ಇಳಿಕೆಯೆಂದೂ ಕಾಣದು, ಅದು ಸದಾ ಹೆಚ್ಚುತ್ತಲೇ ಇರುತ್ತದೆ.

ಒಮ್ಮೆ, 1981ರಲ್ಲಿ ಅಹಮದಾಬಾದಿನಲ್ಲಿರುವಾಗ ಬಾಬೂಜಿಯವರು ಒಂದು ಸರಳ ಸಂದೇಶವನ್ನು ನೀಡಿದರು. ಶ್ರೀ ಕುಶಲ್‌ಭಾಯಿ ಪಟೇಲ್ ಅವರೊಂದಿಗೆ ದಕ್ಷಿಣ ಆಫ್ರಿಕಾಗೆ ಹೋಗಲಿದ್ದ ಅವರು, ನಮ್ಮಲ್ಲಿ ಕೇವಲ ಎರಡು ದಿನಗಳ ಕಾಲ ತಂಗಿದ್ದರು. ಆ ಸರಳ ಸಂದೇಶ ನನ್ನ ಕಿವಿಗಳಲ್ಲಿ ಇಂದಿಗೂ ರಿಂಗಣಿಸುತ್ತಿದೆ:

> ರಾಹೆ ತಲಬ್ ಮೆ ಐಸೆ ಬೇಖಬರ್ ಹೋ ಗಯೆ,
> ಮಂಜಿಲ್ ಪೆ ಆಕೆ ಮಂಜಿಲ್ ಕೊ ಢೂಂಢತೆ ಹೈಂ ।
>
> ಅನ್ವೇಷಣೆಯ ಹಂಬಲದಲ್ಲಿ ಅವರು ಅದೆಷ್ಟು ಮುಳುಗಿಹೋದರೆಂದರೆ,
> ಗುರಿಯನ್ನು ಮುಟ್ಟಿದ ನಂತರವೂ ಗುರಿಯನ್ನು ಅರಸುತ್ತಲೇ ಇರುವರು!

ಆ ಮಾತುಗಳನ್ನು ಕೇಳಿ ನಾನು ಆನಂದದಲ್ಲಿ ತೇಲಿಹೋದೆ. ಅಂದರೆ ನಾವು ಗುರಿಯನ್ನು ಮುಟ್ಟಿದ್ದೇವೆಂದು ಭರವಸೆ ನೀಡಿದಂತಾಯಿತು! ಭಕ್ತನೊಬ್ಬನಿಗೆ ಪಥವೇ ಗುರಿಯಾಗಬಹುದು; ಅದು ಕೇವಲ 'ಅವನ' ಕೃಪೆ ಹಾಗು ಅನುಗ್ರಹವಷ್ಟೆ. ಇಲ್ಲವಾದರೆ, ನಮ್ಮ ಕಡೆಯಿಂದ ನಾವೇನೂ ಮಾಡಲಿಲ್ಲ.

ಗುರು ಮತ್ತು ದೇವರ ಬಗೆಗೆ ಏನು ಹೇಳೋಣ? ದೇವರು ಏನನ್ನೇ ಕೇಳಿದರೂ, ಅವನೂ ಭಿಕ್ಷುಕನಾಗುತ್ತಾನೆ. ನಾವು ಅವನನ್ನು ನಮ್ಮ ಮಟ್ಟಕ್ಕೆ ಕೆಳಗಿಳಿಸಲಾಗದು. ವೈರುಧ್ಯಗಳನ್ನು ಮತ್ತು ಜೀವನ್ಮೃತ

ನಮ್ಮೆಲ್ಲ ಸಾಧನೆಯಿರುವುದು ನಮ್ಮ ಹೃದಯವನ್ನು ಪವಿತ್ರಮಯವಾಗಿಸಿ, ನಿಷ್ಠಾಪೂರ್ಣವಾಗಿಸಿ, ಸಮರ್ಪಿತವಾಗುವಂತೆ ಸಿದ್ಧಗೊಳಿಸಲು. ಪರಮಾತ್ಮನನ್ನು ಆಕರ್ಷಿಸುವುದು ರಿಕ್ತಹೃದಯದ ಈ ಸಿದ್ಧತೆಯೇ. ಪರಾಕಾಷ್ಠೆಯನ್ನು ತಲುಪುವುದು ಕೇವಲ ದೈವೀಕಾರುಣ್ಯ ಮತ್ತು ಕೃಪೆಯಿಂದ ಮಾತ್ರವೇ ಹೊರತು, ನಾವು ಸಿದ್ಧರಾಗಿರುವೆವು ಅಥವಾ ಅಣಿಯಾಗಿರುವೆವು ಎಂಬ ಕಾರಣಕ್ಕಲ್ಲ.

ಸ್ಥಿತಿಯನ್ನು ಮೀರಿದ ಹಾಗು ಪರಮಪದದಲ್ಲಿ ಲಯವಾಗಿರುವ ಗುರುವರ್ಯರು, ತಮ್ಮ ಶಿಷ್ಯರು ತಮ್ಮನ್ನು ಪೂಜಿಸಲು ಅವಕಾಶ ನೀಡುವರೆ? ಅವರು ಸ್ವಪ್ರತಿಷ್ಠೆ, ಕೀರ್ತಿ ಅಥವಾ ಪ್ರಚಾರದಲ್ಲಿ ಆಸಕ್ತರಾಗಿರುವುದಿಲ್ಲ. ಪ್ರಾಯಶಃ ಸಮರ್ಥ ಗುರುವಿನ ಈ ಗುಣಗಳನ್ನು ನೆನಪಿಟ್ಟರೆ, ನಾವು ಮೋಸ ಹೋಗುವುದರಿಂದ ತಪ್ಪಿಸಿಕೊಳ್ಳಬಹುದು. ಭಕ್ತರಾಗಿ ನಾವು ನಮ್ಮ ಲಕ್ಷ್ಯಕ್ಕೆ, ಆರಾಧನೆಗೆ ಮತ್ತು ಪ್ರೇಮಕ್ಕೆ ಅರ್ಹರಾದವರೊಂದಿಗೆ ಅನುರಣಿಸುವುದನ್ನು ಕಲಿತುಕೊಳ್ಳಬೇಕು.

ಸ್ವಪ್ರಯತ್ನದಿಂದ ನಾವೇನನ್ನು ಗಳಿಸಿದರೂ ಅದು ಭಗವಂತ ನೀಡಿದ ಕಾಣಿಕೆಗಳೆದುರು ಸಪ್ಪೆಯಾಗುತ್ತದೆ. ನಾವು ವರುಷಗಟ್ಟಲೆ ಅದೆಷ್ಟೇ ತಪಸ್ಸು ಮಾಡಿದ್ದರೂ, ಶ್ರದ್ಧಾಪೂರ್ವಕ ಸಾಧನೆ ಮಾಡಿದ್ದರೂ, ಪರಮಾತ್ಮನು ನಮ್ಮ ಹೃದಯದೊಳಗೆ ಪೂರ್ಣನಾಗಿ ಇಳಿದುಬರಲೆಂದು ಬೇಡಿಕೆಯನ್ನಿಡಲಾರೆವು. ನಮ್ಮೆಲ್ಲ ಸಾಧನೆಯಿರುವುದು ನಮ್ಮ ಹೃದಯವನ್ನು ಪವಿತ್ರಮಯವಾಗಿಸಿ, ನಿಷ್ಠಾಪೂರ್ಣವಾಗಿಸಿ, ಸಮರ್ಪಿತವಾಗುವಂತೆ ಸಿದ್ಧಗೊಳಿಸಲು. ಪರಮಾತ್ಮನನ್ನು ಆಕರ್ಷಿಸುವುದು ರಿಕ್ತಹೃದಯದ ಈ ಸಿದ್ಧತೆಯೇ. ಪರಾಕಾಷ್ಠೆಯನ್ನು ತಲುಪುವುದು ಕೇವಲ ದೈವೀಕಾರುಣ್ಯ ಮತ್ತು ಕೃಪೆಯಿಂದ

ಮಾತ್ರವೇ ಹೊರತು, ನಾವು ಸಿದ್ಧರಾಗಿರುವೆವು ಅಥವಾ ಅಣಿಯಾಗಿರುವೆವು ಎಂಬ ಕಾರಣಕ್ಕಲ್ಲ. ಇಲ್ಲಿ ನಾವು ಭಗವದ್ಗೀತೆಯ ಎರಡನೇ ಅಧ್ಯಾಯದ ಪ್ರಸಿದ್ಧ 47ನೇ ಶ್ಲೋಕ ನೀಡುವ ವಿವೇಚನೆಯನ್ನು ಅರಿತುಕೊಳ್ಳಬಹುದು:

> ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
> ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವ ಕರ್ಮಣಿ ॥
>
> ನಿನಗೆ ನಿಯೋಜಿತ ಕರ್ಮ ಮಾಡಲಷ್ಟೇ ಅಧಿಕಾರವಿದೆ, ಕರ್ಮಫಲದ ಅಧಿಕಾರವಿಲ್ಲ, ನಿನ್ನನ್ನು ನೀನು ಕರ್ಮಫಲದ ಕಾರಣವೆಂದುಕೊಳ್ಳಬೇಡ; ಮತ್ತು ನೀನು ಅಕರ್ಮದಲ್ಲೆಂದಿಗೂ ಮೋಹತೋರದಿರು.

ಹೃತ್ಪೂರ್ವಕ ಪ್ರಾರ್ಥನೆಗಳೊಂದಿಗೆ,

ಕಮಲೇಶ್

4 ಜುಲೈ 2021
ಕಾನ್ಹಾ ಶಾಂತಿವನಂ

ಪೂಜ್ಯ ಶ್ರೀ ಚಾರೀಜಿಯವರ
94ನೇ ವರ್ಧಂತ್ಯೋತ್ಸವದ ಅಂಗವಾಗಿ ನೀಡಿದ ಸಂದೇಶ
24 ಜುಲೈ 2021

heartfulness
advancing in love